ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 03 ನೇ ಮಾರ್ಚ್, 2020

ಮಹಾರಾಷ್ಟ್ರದ ನವೀಮುಂಬೈನ ಕರ್ನಾಟಕ ಭವನದ ಬಗ್ಗೆ

ಶ್ರೀ ಹೆಚ್. ಎಂ. ರೇವಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):-

019 (194) ಮಾನ್ಯ ಬೃಹತ್ ಮತ್ತು ಮದ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಹಾರಾಷ್ಟ್ರದ ನವೀಮುಂಬೈನಲ್ಲಿ 2017ರಲ್ಲಿ ಉದ್ಘಾಟನೆಯಾದ ಕರ್ನಾಟಕ ಭವನದ ಸಂಪೂರ್ಣ ಖರ್ಚುವೆಚ್ಚಗಳೆಷ್ಟು ಹಾಗೂ ಮಳಿಗೆಗಳನ್ನು ಬಾಡಿಗೆ ಅಥವಾ ಗುತ್ತಿಗೆ ಆಧಾರದಲ್ಲಿ ನೀಡಲಾಗಿದೆಯೇ ; ಮಳಿಗೆಗಳನ್ನು ಟೆಂಡರ್ ಮುಖಾಂತರ ನೀಡಲಾಗಿದೆಯೇ ; ಇದಕ್ಕೆ ಮಂಡಳಿಯಿಂದ ಅನುಮೋದನೆಗೊಂಡಿರುತ್ತದೆಯೇ ;

(ಆ) ಎಂ.ಎಸ್.ಐ.ಎಲ್. ನಿಗಮದಿಂದ ನಡೆಸುತ್ತಿರುವ ಚಿಟ್‌ಫಂಡ್ ವ್ಯವಹಾರದ ವಾರ್ಷಿಕ ಆದಾಯ ಮತ್ತು ವೆಚ್ಚಗಳ ವಿವರ ನೀಡುವುದು ;

(ಇ) ಎಂ.ಎಸ್.ಐ.ಎಲ್. ನಿಗಮದ ಸುಂಕ, ಜಿ.ಎಸ್.ಟಿ. ಅಥವಾ ಆದಾಯ ತೆರಿಗೆ ತೆಗೆದು ಕೇಂದ್ರ ಕಚೇರಿಯ ವಾರ್ಷಿಕ ನಿವ್ವಳ ಲಾಭವೆಷ್ಟು ಹಾಗೂ ಖರ್ಚು ವೆಚ್ಚಗಳೆಷ್ಟು ; (ವಿವರ ಒದಗಿಸುವುದು)

(ಈ) ಎಂ.ಎಸ್.ಐ.ಎಲ್. ನಿಗಮದಿಂದ ನಡೆಸುತ್ತಿರುವ ಜನರಿಕ್ ಔಷಧಾಲಯದ ಎಷ್ಟು ಮಳಿಗೆಗಳನ್ನು ಪ್ರಾರಂಭಿಸಲಾಗಿದೆ ; ಪ್ರತಿ ಮಳಿಗೆಗಳ ಖರ್ಚುವೆಚ್ಚವೆಷ್ಟು? (ವಿವರ ನೀಡುವುದು)